E - 577706 (8)

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ


ದೂರವಾಣಿ ಸಂಖ್ಯೆ: 080-22240228
ಫ್ಯಾಕ್ಸ್ ಸಂಖ್ಯೆ: 080-22214663

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ : fara1957@gmail.com

ನಿಗಮದ ಗುರುತಿನ ಸಂಖ್ಯೆ: (ಸಿ.ಐ.ಎನ್.); ಯು40109ಕೆಎ1999ಎಸ್‌ಜಿಸಿ925521

ಅಧಿಕೃತ ಕಚೇರಿ ವಿಳಾಸ: ನಿಯಂತ್ರಣ ವ್ಯವಹಾರಗಳು, ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-09.


## ಅಧಿಕೃತ ಜ್ಞಾಪನ

ವಿಷಯ: ಮಾನವ ಸಂಪನ್ಮೂಲ ಅಧ್ಯಯನಕ್ಕೆ ನೋಡಲ್ ಅಧಿಕಾರಿಯನ್ನು ನೇಮಿಸುವ ಬಗ್ಗೆ.

ಉಲ್ಲೇಖ: 1. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ., ನಿಗಮ ಕಾರ್ಯಾಲಯರವರ ದಿನಾಂಕ:17.03.2023ದ ಅನುಮೋದನೆ.

2. DWA Ltr No.CEE/T&P/SEE-1/EE(P0/AEEP4/2023-24/6267-75 Dt:20.10.2023.

*******

**ಪೀಠಿಕೆ:**

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ:12.05.2023 ಮತ್ತು ಅದಕ್ಕೆ ಹಿಂದಿನ ದರಾದೇಶಗಳಲ್ಲಿ ಕವಿಪ್ರನಿನಿಯು ಮಾನವ ಸಂಪನ್ಮೂಲದ ಬಗ್ಗೆ ಅಧ್ಯಯನ ನಡೆಸಿ, ಆ ಅಧ್ಯಯನದ ವರದಿಯ ಆಧಾರದ ಮೇಲೆ ತಮ್ಮ ಸಿಬ್ಬಂದಿಯ ನಿರ್ವಹಣೆಯನ್ನು ಮಾಡಬೇಕೆಂದು ಹಾಗು ಆ ಅಧ್ಯಯನದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಸೂಚಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಈ ಕಚೇರಿ ಟಿಪ್ಪಣಿ ದಿನಾಂಕ:07.03.2023ರಲ್ಲಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ನಿರ್ದೇಶಕರು (ಆ ಮತ್ತು ಮಾ.ಸಂ) ರವರ ಮೂಲಕ ಸಲ್ಲಿಸಿದ್ದು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿರವರು ಅಧ್ಯಯನ ನಡೆಸಲು ದಿನಾಂಕ:17.03.2023ರಂದು ಅನುಮೋದನೆ ನೀಡಿರುತ್ತಾರೆ. ಈ ಅನುಮೋದನೆಯ ಆಧಾರದ ಮೇಲೆ ಮುಖ್ಯ ಇಂಜಿನಿಯರು(ವಿ)(ಟೆಂಡರಿಂಗ್ ಅಂಡ್ ಪ್ರೋಕ್ಯೂರ್‌ಮೆಂಟ್) ರವರು ಟೆಂಡರ್ ಪ್ರಕ್ರಿಯೆ ನಡೆಸಿ, M/s Centre for Organisation Development, Hyderabad ಅವರಿಗೆ ಹೊರಡಿಸಿರುತ್ತಾರೆ. ಈ Detailed Work Award ನಲ್ಲಿ ಆರ್ಥಿಕ ಸಲಹೆಗಾರರು, ನಿಯಂತ್ರಣ ವ್ಯವಹಾರಗಳುರವರ ದೃಢೀಕರಣದ ಆಧಾರದ ಮೇಲೆ ಸದರಿ ಕಂಪನಿಯವರ ಬಿಲ್ಲುಗಳನ್ನು ಪಾವತಿಸಲು ತಿಳಿಸಲಾಗಿರುತ್ತದೆ.

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ ಹಾಗು Detailed Work Award ನಲ್ಲಿನ ಸೂಚನೆಗಳನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ ಸಂಖ್ಯೆ:ಕವಿಪ್ರನಿನಿ/ಬಿ36/45583/2023-24/**2213-2234. **ದಿನಾಂಕ:** 23-11-2023.

ಶ್ರೀ ಕೆ. ಅನಿಲ್ ಕುಮಾರ್, ಆರ್ಥಿಕ ಸಲಹೆಗಾರರು, ನಿಯಂತ್ರಣ ವ್ಯವಹಾರಗಳು, ಅವರನ್ನು M/s Centre for Organisation Development, Hyderabad ಅವರು ನಡೆಸುತ್ತಿರುವ ಮಾನವ ಸಂಪನ್ಮೂಲ ಅಧ್ಯಯನಕ್ಕೆ ನೋಡಲ್ ಅಧಿಕಾರಿಯನ್ನಾಗಿ ಕೆಲಸ ನಿರ್ವಹಿಸಲು ಆದೇಶಿಸಿದೆ ಹಾಗು ಅಧ್ಯಯನದ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಿ ಕಾಲಕಾಲಕ್ಕೆ ಮಾನ್ಯ ನಿರ್ದೇಶಕರು(ಆ ಮತ್ತು ಮಾ.ಸಂ)ರವರಿಗೆ ವರದಿಯನ್ನು ನೀಡಲು ಸೂಚಿಸಿದೆ.

ನಿರ್ದೇಶಕರು(ಆ.ಮತ್ತು ಮಾ.ಸಂ.)
ಕವಿಪ್ರನಿನಿ., ಬೆಂಗಳೂರು.

EE-II
23/11/23

**ಪ್ರತಿಗಳು:**

1. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಾರ್ಯಾಲಯ, ಕಾವೇರಿ ಭವನ, ಕವಿಪ್ರನಿನಿ., ಬೆಂಗಳೂರುರವರ ಮಾಹಿತಿಗಾಗಿ.
2. ಮುಖ್ಯ ಇಂಜಿನಿಯರು(ವಿ), ಕವಿಪ್ರನಿನಿ., ಪ್ರಸರಣ ವಲಯಗಳು, ಬೆಂಗಳೂರು/ಮೈಸೂರು/ಕಲಬುರ್ಗಿ/ಬಾಗಲಕೋಟೆ/ಹಾಸನ/ತುಮಕೂರುರವರ ಮಾಹಿತಿಗಾಗಿ.

3. ಮುಖ್ಯ ಇಂಜಿನಿಯರು(ವಿ), ನಿಗಮ ಕಾರ್ಯಾಲಯ, ಕಾವೇರಿ ಭವನ, ಕವಿಪ್ರನಿನಿ., (ಟೆಂಡರಿಂಗ್ ಅಂಡ್ ಪ್ರೋಕ್ಯೂರ್‌ಮೆಂಟ್)/ಪಿ ಅಂಡ್ ಸಿ/ಆರ್ ಟಿ ಅಂಡ್ ಆರ್ ಅಂಡ್ ಡಿ/ಟಿ.ಎ.ಕ್ಯೂಸಿ/ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಬೆಂಗಳೂರುರವರ ಮಾಹಿತಿಗಾಗಿ.
4. ಆರ್ಥಿಕ ಸಲಹೆಗಾರರು, ನಿಯಂತ್ರಣ ವ್ಯವಹಾರಗಳು/ಲೆಕ್ಕಗಳು ಮತ್ತು ಸಂಪನ್ಮೂಲ/ಆಂತರಿಕ ಪರಿಶೋಧನೆ/ಎನ್.ಡಿ.ಸಿ.ಪಿ.ಎಸ್, ನಿಗಮ ಕಾರ್ಯಾಲಯ, ಕಾವೇರಿ ಭವನ, ಕವಿಪ್ರನಿನಿ., ಬೆಂಗಳೂರುರವರ ಮಾಹಿತಿಗಾಗಿ.
5. ಆಧಾಳಿತಾಧಿಕಾರಿ(ಮಾ.ಸಂ.ಅ.ಕೇ), ಕವಿಪ್ರನಿನಿ., ಹೂಡಿ, ಬೆಂಗಳೂರುರವರ ಮಾಹಿತಿಗಾಗಿ.
6. ಅಧೀಕ್ಷಕ ಇಂಜಿನಿಯರು(ವಿ)(ಐ.ಟಿ), ನಿಗಮ ಕಾರ್ಯಾಲಯ, ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರುವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in→ಇ-ಪ್ರಸರಣದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
7. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/ನಿರ್ದೇಶಕರು (ಪ್ರಸರಣ)/ಸದರಿ ವಿಷಯವನ್ನು ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಹಣಕಾಸು)/ನಿರ್ದೇಶಕರು(ಪ್ರಸರಣ) ರವರ ಗಮನಕ್ಕೆ ತರಲು ಕೋರಿದೆ.
8. ಸಕಾನಿಇಂ(ವಿ)(ನಿ.ವ್ಯ-2)/ಆಕಾ/ಮು.ಕ.